**ಅಸಲು ದಾವ ಸಂಖ್ಯೆ: 400/2018**

**ಡಿ.ಡಬ್ಲೂ -1**

**ದಿ:28-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ MTH ರವರಿಂದ:-</u>**

1. ದಿನಾನಾತ ರಾಜಾರಾಮ ಕಾರೇಕರ ನನ್ನ ತಂದೆ ಎಂದರೆ ಸರಿ. ಸದರಿಯವರಿಗೆ ನಾನು ಹಾಗೂ 2ನೇ ಪ್ರತಿವಾದಿ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. 2ನೇ ಪ್ರತಿವಾದಿ ಶಶಿಕಾಂತ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿ 2(ಎ) ರಿಂದ (ಸಿ) ರವರು 2ನೇ ಪ್ರತಿವಾದಿಯ ವಾರಸುದಾರರು ಎಂದರೆ ಸರಿ. 3 ರಿಂದ 8ನೇ ಪ್ರತಿವಾದಿಯರು ನನ್ನ ಸಹೋದರಿಯರು ಎಂದರೆ ಸರಿ. ನಾನು 2ನೇ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 2ನೇ ಪಿಯುಸಿ ವಿದ್ಯಾಭ್ಯಾಸವನ್ನು 1981 ರಲ್ಲಿ ಮುಗಿಸಿರುತ್ತೇನೆ. ನನ್ನ ತಂದೆ ಗೋಲ್ಡಸ್ಮಿತ್ ಆಗಿದ್ದರು ಎಂದರೆ ಸರಿ. ಗಂಡುಮಕ್ಕಳಲ್ಲಿ ನನ್ನ ತಂದೆಗೆ ನಾನೇ ಹಿರಿಯ ಮಗ ಎಂದರೆ ಸರಿ. ನನ್ನ ತಂದೆಯ ವ್ಯವಹಾರಗಳ ಬಗ್ಗೆ ಹಾಗೂ ಅವರ ಎಲ್ಲಾ ವ್ಯಾಪಾರದ ವಹಿವಾಟುಗಳ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ನನ್ನ ತಂದೆ ಮಾಡುವ ವ್ಯವಹಾರಗಳಲ್ಲಿ ನಾನು ಉಪಸ್ಥಿತನಿರುತ್ತಿದ್ದೆ ಎಂದರೆ ಸರಿ.

2. ಈ ದಾವೆಯಲ್ಲಿ ನಾನು ಸಲ್ಲಿಸಿರುವ ಲಿಖಿತ ಹೇಳಿಕೆ ತಯಾರು ಮಾಡಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನ ಪ್ಲಾಟ ನಂಬರ ಹಾಗೂ ಆರ್ ಎಸ್ ನಂಬರ ನನಗೆ ಗೊತ್ತಿಲ್ಲ ಆದರೆ ಸಿಟಿ ಸರ್ವೆ ನಂಬರ ನನಗೆ ತಿಳಿದಿರುತ್ತದೆ. ದಾವಾ ಸ್ವತ್ತು ಖಾಲಿ ಜಾಗ ಆಗಿರುತ್ತದೆ ಎಂದರೆ ಸಾಕ್ಷಿಯು ಅಲ್ಲಿ ಒಂದು ಶೆಡ್ ಇರುತ್ತದೆ ಹಾಗೂ ಅದಕ್ಕೆ ವಿದ್ಯುತ್ ಸಂಪರ್ಕ ತನ್ನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಶೆಡ್ ಇರುತ್ತದೆ ಹಾಗೂ ವಿದ್ಯುತ್ ಸಂಪರ್ಕ ಪಡೆಯಲಾಗಿದೆ ಎಂದು ತೋರಿಸಲು ನಾನು ದಾಖಲೆಗಳನ್ನು

ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ರಾಷ್ಟ್ರೀಯ ಹೆದ್ದಾರಿ ಎನ್ ಹೆಚ್ 4ಎ ಗೆ ತಾಗಿ ಇರುತ್ತದೆ ಎಂದರೆ ಸಾಕ್ಷಿಯು ಅದು ಕಾಂಗ್ರೆಸ ರಸ್ತೆಗೆ ತಾಗಿ ಇರುತ್ತದೆ ಎಂದು ನುಡಿಯುತ್ತಾರೆ. 1969 -70 ರಲ್ಲಿ ರಾಷ್ಟ್ರೀಯ ಹೆದ್ದಾರಿಯ ಇಲಾಖೆಯ ಕಾಂಗ್ರೆಸ ರಸ್ತೆಯ ಕೆಲವು ಭಾಗಗಳನ್ನು ಭೂ ಸ್ವಾಧೀನಪಡಿಸಿಕೊಂಡಿರುತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ಮೂಲ ಮಾಲೀಕರಾದ ಮೊಹಮ್ಮದ ಯುಸೂಫ ಮಾಡಿವಾಳೆ ರವರ ಹೆಸರಿಗೆ ನೋಟಿಫಿಕೇಶನ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಮೊಹಮ್ಮದ ಯುಸೂಫ ಮಾಡಿವಾಳೆ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಸದರಿ ಮೊಹಮ್ಮದ ಯುಸೂಫ ಮಾಡಿವಾಳೆ ರವರು ದಿಃ 04-03-1968 ರಂದು ವಾದಿಯ ತಾಯಿ ರವರೊಂದಿಗೆ 4,800/- ರೂ.ಗಳಿಗೆ ಕ್ರಯದ ಕರಾರುಪತ್ರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರ ತಾಯಿ ರವರು ಮೊಹಮ್ಮದ ಯುಸೂಫ ಮಾಡಿವಾಳೆ ರವರ ವಿರುದ್ಧ ಅಸಲು ದಾವಾ ಸಂಖ್ಯೆ 507/1972 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ವಜಾಗೊಂಡು ನಂತರ ಅದರ ವಿರುದ್ಧ ಮೇಲ್ಮನವಿಯನ್ನೂ ಸಹ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ಪುರಸ್ಕೃತಗೊಂಡು ಮಾಡಿವಾಳೆ ರವರು ವಾದಿಯರ ತಾಯಿಗೆ ಕ್ರಯ ಪತ್ರ ಮಾಡಿಕೊಡಬೇಕೆಂದು ತೀರ್ಪು ಆಗಿರುತ್ತದೆ ಎಂದರೆ ಸರಿ. ಮಾಡಿವಳೆ ರವರು ಕ್ರಯ ಪತ್ರ ಮಾಡಿಕೊಡದೆ ಇದ್ದಾಗ ಅಮಲಜಾರಿ ಸಂಖ್ಯೆ 3/1978 ರಂತೆ ಅರ್ಜಿ ಸಲ್ಲಿಸಿದ ನ್ಯಾಯಾಲಯದ ಮುಖಾಂತರ ಕ್ರಯ ಪತ್ರ ಮಾಡಿಕೊಡಲಾಗಿದೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಸಿ ಟಿ ಎಸ್ ನಂಬರ ತಪ್ಪಾಗಿ 5730 ಎಂದು ನಮೂದಿಸಿದ ಕಾರಣ ಅದರ ಕುರಿತು ಒಂದು ತಿದ್ದುಪಡಿ ಪತ್ರವನ್ನು ನ್ಯಾಯಾಲಯದ ಮುಖಾಂತರ ಮಾಡಿಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಿದ್ದುಪಡಿ ಪತ್ರವನ್ನು ದಿಃ 16-05-1997 ರಂದು ಮಾಡಿಕೊಟ್ಟ ನಂತರ ಸದರಿ ಆಸ್ತಿ ವಾದಿಯರ ಹೆಸರು ಸಿಟಿ ಸರ್ವೆ ದಾಖಲೆಗಳಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ.

3. ಪ್ರತಿವಾದಿಯರ ಹೆಸರು ಸಿ ಟಿ ಸರ್ವೆ ದಾಖಲೆಗಳಲ್ಲಿ ನಮೂದಾದ ನಂತರ ಮಾಡಿವಾಳೆ ರವರ ಸಹೋದರರು ಮಾಡಿವಾಳೆ ರವರ ವಿರುದ್ಧ ಒಂದು ಹಿಸ್ಸಾ ದಾವೆ ಎಂದರೆ ವಿಭಾಗ ಕೋರಿ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಅಸಲು ದಾವಾ ಸಂಖ್ಯೆ 356/1988 ರಂತೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ನಂತರ ಮತ್ತೊಂದು ನ್ಯಾಯಾಲಯಕ್ಕೆ ವರ್ಗಾವಣೆ ಆಗಿ ಅದರ ಸಂಖ್ಯೆ 230/1996 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ಧ ಮಾಡಿವಾಳೆ ರವರು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ಬೆಳಗಾವಿಯ 5ನೇ ಅಧಿಕ ಜಿಲ್ಲಾ ನ್ಯಾಯಾಲಯದಲ್ಲಿ ಅಗಸ್ಟ 2016 ರಲ್ಲಿ ಮುಕ್ತಾಯಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಹಾಗೂ ಮೇಲ್ಮನವಿಯಲ್ಲಿ ನನ್ನ ತಂದೆಯವರನ್ನು ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಸಾಕ್ಷಿಯು ತನ್ನ ತಂದೆ ಸದರಿ ದಾವೆಯಲ್ಲಿ ಹಾಜರಾಗುತ್ತಿದ್ದ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ಹಾಗೂ ಮೇಲ್ಮನವಿಯಲ್ಲಿ ನಮ್ಮ ಪರವಾಗಿ ಜಿ.ಬಿ. ಭಟ್ ವಕೀಲರೆ ವಕಾಲತ್ತು ವಹಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ವಕೀಲರು ತನ್ನ ತಂದೆಗೆ ಮೊದಲಿನಿಂದ ಸ್ನೇಹಿತರು ಎಂದು ನುಡಿಯುತ್ತಾರೆ. ನನ್ನ ತಂದೆ ಹಾಗೂ ವಾದಿಯರ ವಕೀಲರು ಜಿ.ಬಿ. ಭಟ್ ರವರೇ ಆಗಿದ್ದರು ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**